ಕ್ರ. ಸಂ.	ಅಮಾನತ್ತಿನಲ್ಲಿರುವ ಅಧಿಕಾರಿ: ನೌಕರರ ಹೆಸರು	ಅಮಾನತ್ತಿನ ದಿನಾಂಕ	ಅಮಾನತ್ತಿಗೆ ಕಾರಣ
10)	ವೆಂಕೋಬರಾವ್,	08-07-2000 20-01-2000 ರಿಂದ ಅನ್ವಯ ವಾಗುವಂತೆ.	ವರದಕ್ಷಿಣೆಕೊಲೆ ಬಗ್ಗೆ ದಸ್ತಗಿರಿಯಾಗಿರುವ ಬಗ್ಗೆ.
11)	ಹೆಚ್.ಬಿ. ವೆಂಕಟೇಶ್‌ಗೌಡ, ತೋಟಗಾರ, ಹೊಗಳಗೆರೆ.	24-07-2000	ಅನಧಿಕೃತ ಗೈರುಹಾಜರಿ ಬಗ್ಗೆ.
12)	ಕೃಷ್ಣೇಗೌಡ, ಬಿನ್. ಸಣ್ಣೇಗೌಡ.	17-08-2000 25-2-2000 ರಿಂದ ಅನ್ವಯ ವಾಗುವಂತೆ	ಕ್ರಿಮಿನಲ್ ಆರೋಪದ ಮೇರೆಗೆ ದಸ್ತಗಿರಿಯಾದ ಬಗ್ಗೆ.
13)	ವೆಂಕಟೇಶ್, ತೋಟಗಾರ ಜೋಡಿಬೊಮ್ಮಸಂದ್ರ	04-09-2000 09-10-99 ರಿಂದ ಲೇ ಅನ್ವಯ ವಾಗುವಂತೆ.	ಕ್ರಿಮಿನಲ್ ಆರೋಪದ ಮೇಲೆ ದಸ್ತಗಿರಿಯಾದ ಬಗ್ಗೆ.
14)	ಕೃಷ್ಣಪ್ಪ, ತೋಟಗಾರ, ಜೋಡಿವಮ್ಮಸಂದ್ರ.	04-09-2000	ಕ್ರಿಮಿನಲ್ ಆರೋಪದ ಮೇಲೆ.

ತರೀಕೆರೆ ತಾಲ್ಲೂಕನ್ನು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಚಿಕ್ಕಮಗಳೂರು ವಿಭಾಗಕ್ಕೆ ಸೇರಿಸುವ ಬಗ್ಗೆ

3028 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತರೀಕೆರೆ ತಾಲ್ಲೂಕು ಈಗ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ದಾವಣಗೆರೆ ವಿಭಾಗಕ್ಕೆ ಸೇರಿದೆಯೇ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಹೊಸ ವಿಭಾಗ ಆಗಿರುವುದು ನಿಜವಲ್ಲವೆ?

ಇ) ತರೀಕೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲೆಯಲ್ಲಿರುವುದರಿಂದ, ಆಡಳಿತ ದೃಷ್ಟಿಯಿಂದ ಚಿಕ್ಕಮಗಳೂರು ವಿಭಾಗಕ್ಕೆ ತರೀಕೆರೆ ವಿಭಾಗಗಳನ್ನು ಸೇರಿಸಲು ಕಾನೂನು ತೊಡಕಿದೆಯೇ?

ಈ) ಇಲ್ಲದಿದ್ದಲ್ಲಿ ತರೀಕೆರೆ ತಾಲ್ಲೂಕನ್ನು ಚಿಕ್ಕಮಗಳೂರು ವಿಭಾಗಕ್ಕೆ ಯಾವಾಗ ಸೇರಿಸಲಾಗುವುದು.?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆ ಸಚಿವರು) :

ಅ) ಹೌದು.

ಆ) ಹೌದು.

ಇ) ಶಿವಮೊಗ್ಗದಿಂದ ತರೀಕೆರೆಗೆ ದೂರವು 39 ಕಿ.ಮೀ.ಗಳಿದ್ದು, ಚಿಕ್ಕಮಗಳೂರಿನಿಂದ ತರೀಕೆರೆಗೆ 63 ಕಿ.ಮೀ.ಗಳಾಗುತ್ತದೆ. ಆದುದರಿಂದ ತರೀಕೆರೆ ನಿಯಂತ್ರಣ ಬಿಂದುವನ್ನು ಕಾರ್ಯಾಚರಣೆಯ ದೃಷ್ಟಿಯಿಂದ ಕ.ರಾ.ರ.ಸರ, ಸಂಸ್ಥೆಯ ದಾವಣಗೆರೆ ವಿಭಾಗದ ಶಿವಮೊಗ್ಗ ಘಟಕದ ಆಡಳಿತ ವ್ಯಾಪ್ತಿಗೆ ಸೇರಿಸುವುದು ಸೂಕ್ತವಿರುತ್ತದೆ. ಈ ಬಗ್ಗೆ ಯಾವುದೇ ಕಾನೂನಿನ ತೊಡಕಿರುವುದಿಲ್ಲ.

ಈ) ಕಡೂರಿನಲ್ಲಿ ಘಟಕವನ್ನು ನಿರ್ಮಿಸಲಾಗುತ್ತಿದೆ. ಅದನ್ನು ಪ್ರಾರಂಭಿಸಿದ ನಂತರ ತರೀಕೆರೆ ನಿಯಂತ್ರಣ ಬಿಂದುವನ್ನು ಆ ಘಟಕಕ್ಕೆ ಸೇರಿಸಲಾಗುವುದು. ಈ ಘಟಕವು ಕ.ರಾ.ರ.ಸಾ. ಸಂಸ್ಥೆಯ ಚಿಕ್ಕಮಗಳೂರು ವಿಭಾಗ ವ್ಯಾಪ್ತಿಗೆ ಬರುತ್ತದೆ.

ತರೀಕೆರೆ ತಾಲ್ಲೂಕು ಬಾವಿಕೆರೆಯಲ್ಲಿ ಸಾರ್ವಜನಿಕರಿಗೆ ಜಮೀನು ಬಿಡುಗಡೆ ಮಾಡುವುದು

3029 - ಶ್ರೀ ನೀಲಕಂಠಪ್ಪ ಬಿ.ಆರ್. (ತರೀಕೆರೆ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ತರೀಕೆರೆ ತಾಲ್ಲೂಕಿನ ಬಾವಿಕೆರೆ ಗ್ರಾಮದ ಸರ್ವೆ ನಂಬರ್ 7ರಲ್ಲಿ ಎಷ್ಟು ಜಮೀನು ಕೃಷಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿರುತ್ತದೆ?

2) ಸುಮಾರು 460 ಎಕರೆ ಜಮೀನಿನಲ್ಲಿ ಸಾರ್ವಜನಿಕರಿಗೆ 100 ಎಕರೆ ಜಮೀನು ಬಿಡುಗಡೆ ಮಾಡುವ ಪ್ರಸ್ತಾವನೆ ಇದೆಯೇ?

3) ಜಮೀನಿನ ಬಿಡುಗಡೆ ಬಗ್ಗೆ ಸಾರ್ವಜನಿಕರು ಹೋರಾಟ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

4) ಬಂದಿದ್ದಲ್ಲಿ, ಜಮೀನನ್ನು ಯಾವಾಗ ಬಿಡುಗಡೆ ಮಾಡಲಾಗುವುದು.

ಶ್ರೀ ಟಿ.ಬಿ. ಜಯಾಚಂದ್ರ (ಕೃಷಿ ಸಚಿವರು) :

ಅ) ತರೀಕೆರೆ ತಾಲ್ಲೂಕಿನ ಬಾವಿಕೆರೆ ಗ್ರಾಮದಲ್ಲಿ ಕೃಷಿ ಇಲಾಖೆಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ.

ಆ) ಉದ್ಭವಿಸುವುದಿಲ್ಲ.